<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.</u>

<u>ಸಿಸಿ ನಂಬರ್ **911/2023**</u>

<u>ಫಿರ್ಯಾದಿ</u> ಶ್ರೀಮತಿ ಫಾಮೋದ ಕೋಂ ಹಸನಮೀಯಾ ನರೇಗಲ್ಲ
ವಯಾಃ **36** ವರ್ಷ**,** ಉದ್ಯೋಗಃ ಬ್ಯೂಟಿಪಾರ್ಲರ್
ಸಾಃ ಬಸವೇಶ್ವರ ನಗರ**, 9** ನೇ ಕ್ರಾಸ**,** ಹಾವೇರಿ

ವಿರುದ್ಧ

<u>ಆರೋಪಿ</u> ಶ್ರೀಮತಿ ರೇಖಾ ಕೋಂ ರಮೇಶ ಕೊಟಕ್
ವಯಾಃ **55** ವರ್ಷ**,** ಉದ್ಯೋಗಃ ವ್ಯಾಪಾರ
ಸಾಃ ಬಸವೇಶ್ವರ ನಗರ**,** ಬಿ ಬ್ಲಾಕ್ **2** ನೇ ಕ್ರಾಸ
ಹಾವೇರಿ ತಾಃಜಿಃ ಹಾವೇರಿ

**:<u>ಆಪಾದನೆ</u>:**

ಇದರಲ್ಲಿ ಶ್ರೀ ಮಹಮ್ಮದ ಅನ್ವರ ಹುಸೇನ ಮೊಗಲಾನಿ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಹಾವೇರಿ ಆದ ನಾನು ಆರೋಪಿತನಾದ ನಿನ್ನ ಮೇಲೆ ದೋಷಾರೋಪಣೆ ಮಾಡುವುದೇನೆಂದರೆ,

ಆರೋಪಿಯಾದ ನೀವು ಪಿರ್ಯಾದಿಗೆ ಪರಿಚಯ ಇದ್ದು, ನಿಮ್ಮ ವ್ಯಾಪಾರದ ಅಭಿವೃದ್ಧಿಯ ಸಲುವಾಗಿ ಆರೋಪಿಯಾದ ನೀವು ಪಿರ್ಯಾದಿಯಿಂದ 2020 ನೇ ಇಸ್ವಿಯಲ್ಲಿ ರೂ.6,00,000/- ಗಳನ್ನು ಪಡೆದುಕೊಂಡಿದ್ದು, ಪಿರ್ಯಾದಿಯು ಹಣವನ್ನು ವಾಪಾಸು ಕೇಳಿದಾಗ ಆರರೋಪಿಯಾದ ನೀವು ಇಂದು, ನಾಳೆ ಕೊಡುತ್ತೇನೆ ಎಂದು ಹೇಳಿದ್ದು, ನಂತರ ಆರೋಪಿಯಾದ ನೀವು ನಿಮ್ಮ ಖಾತೆ ಹೊಂದಿರುವ ದೇನಾ ಬ್ಯಾಂಕ್, ಹಾವೇರಿ ಖಾತೆ ಚೆಕ್ಕ ನಂಬರಃ 245258 ನೇದ್ದನ್ನು ಪಿರ್ಯಾದಿಯ ಹೆಸರಲ್ಲಿ ಕೊಟ್ಟಿದ್ದು ಮತ್ತು ಸದರ ಚೆಕ್ಕನ್ನು ದಿನಾಂಕಃ 18.10.2021 ರಂದು ನಗದುಗೊಳಿಸುವಂತೆ ಹೇಳಿದ್ದು ಮತ್ತು ಸದರಿ ದಿನಾಂಕದಂದು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇರುತ್ತದೆ ಅಂತಾ ಖಚಿತವಾಗಿ ಹೇಳಿದ್ದು, ನಂತರ ಪಿರ್ಯಾದಿಯು ಆರೋಪಿಯಾದ ನೀವು ಕೊಟ್ಟಂತಹ ಚೆಕ್ಕನ್ನು ದಿನಾಂಕಃ 18.10.2021 ರಂದು ತಾನು ಖಾತೆ ಹೊಂದಿದ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಮುಖ್ಯ ಶಾಖೆ ಹಾವೇರಿ ಇವರಲ್ಲಿ ಹಾಜರುಪಡಿಸಿದ್ದು, ಆಗ ಆರೋಪಿಯಾದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು

ಹಿಂಬರಹದೊಂದಿಗೆ ದಿನಾಂಕಃ 19.10.2021 ರಂದು ಚೆಕ್ಕು ನಗದೀಕರಣಗೊಳ್ಳದೇ ವಾಪಸಾಗಿರುತ್ತದೆ. ದಿನಾಂಕಃ17.11.2021 ರಂದು ನೊಂದಣಿ ಅಂಚೆ ಮೂಲಕ ಡಿಮ್ಯಾಂಡ್ ನೋಟಿಸ ಜಾರಿ ಮಾಡಿದ್ದರೂ, ಚೆಕ್ಕಿನ ಹಣವನ್ನು ಮರುಪಾವತಿ ಮಾಡದೇ ಅಪರಾಧವೆಸಗಿದ್ದು, ಕಾರಣ ವರ್ಗಾವಣೆಯ ಲಿಖಿತ ಪತ್ರಗಳ ಅಧಿನಿಯಮ ಕಲಂ.138 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಮೇಲೆ ಹೇಳಿದ ಆರೋಪಣೆ ಮೇಲೆ ನೀವು ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಿರುತ್ತೀರಿ ಎಂದು ನಿರ್ದೇಶಿಸಿದ್ದೇನೆ.

ಹಾವೇರಿ.
ದಿಃ 15-09-2025.

(ಮಹಮ್ಮದ ಅನ್ವರ ಹುಸೇನ ಮೊಗಲಾನಿ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.

ಸಿಸಿ ನಂಬರ್ **911/2023**

ದಿನಾಂಕಃ **15.09.2025**

| | |
|---|---|
| ಫಿರ್ಯಾದಿ | ಶ್ರೀಮತಿ ಫಾಮೋದ ಕೋಂ ಹಸನಮೀಯಾ ನರೇಗಲ್ಲ<br>ವಯಾಃ **36** ವರ್ಷ, ಉದ್ಯೋಗಃ ಬ್ಯೂಟಿಪಾರ್ಲರ್<br>ಸಾಃ ಬಸವೇಶ್ವರ ನಗರ, **9** ನೇ ಕ್ರಾಸ, ಹಾವೇರಿ |

ವಿರುದ್ದ

| | |
|---|---|
| ಆರೋಪಿ | ಶ್ರೀಮತಿ ರೇಖಾ ಕೋಂ ರಮೇಶ ಕೊಟಕ್<br>ವಯಾಃ **55** ವರ್ಷ, ಉದ್ಯೋಗಃ ವ್ಯಾಪಾರ<br>ಸಾಃ ಬಸವೇಶ್ವರ ನಗರ, ಬಿ ಬ್ಲಾಕ್ **2** ನೇ ಕ್ರಾಸ<br>ಹಾವೇರಿ ತಾಃಜಿಃ ಹಾವೇರಿ |

1. ಈ ಮೇಲೆ ಹೇಳಿದ ಆರೋಪಣೆ ನಿನಗೆ ಅರ್ಥವಾಗಿದೆಯೇ?

ಉತ್ತರಃ

2. ಈ ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿಯೋ?

ಉತ್ತರಃ

*(ಈ ಮೇಲೆ ಹೇಳಿದ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಒದಿ ಹೇಳಿದ್ದು, ಆರೋಪಿ ಅರ್ಥ ಮಾಡಿಕೊಂಡು ಹೇಳಿದ ಹೇಳಿಕೆಯನ್ನು ಅದೇ ರೀತಿ ಬರೆದುಕೊಳ್ಳಲಾಯಿತು)*

(ಮಹಮ್ಮದ ಅನ್ವರ ಹುಸೇನ ಮೊಗಲಾನಿ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

ಆರೋಪಿಯ ಸಹಿ: